**ಎಮ್ ವಿ ಸಿ ನಂಃ1544/2022**
**ಪಿ.ಡಬ್ಲ್ಯೂಃ1,**

**<u>ದಿನಾಂಕ :04-09-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಮುಖ್ಯ ವಿಚಾರಣೆ :- ಶ್ರೀ. ಎನ್. ಎಸ್. ಪಿ. ಅರ್ಜಿದಾರ ಪರ ವಕೀಲರಿಂದ :</u>**

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಪಿ-1- ಎಫ್ ಐ ಆರ್ ನಕಲು

ನಿಪಿ-2- ದೂರು ನಕಲು

ನಿಪಿ-3- ಮಹಜರ್

ನಿಪಿ-4- ಗಾಯದ ಪ್ರಮಾಣ ಪತ್ರ

ನಿಪಿ-5- ಐ ಎಮ್ ವಿ ವರಧಿ

ನಿಪಿ-6- ಚಾರ್ಜಶೀಟ್

ನಿಪಿ-7- ಎತ್ತಿನ ಬಂಡಿಯ ಜಖಂ ಆದ ಅಂದಾಜು ಖರ್ಚು

ನಿಪಿ-8 ಮತ್ತು 9- ಎತ್ತುಗಳ ಮಾರುಕಟ್ಟೆ ದರದ ರಶಿದಿ -(2)

ಆದ್ದರಿಂದ ಅರ್ಜಿಯನ್ನು ಮಂಜೂರು ಮಾಡಲು ಕೋರಲಾಯಿತು.

**<u>ಪಾಟಿ ಸವಾಲು :- ಶ್ರೀ. ಬಿ.ಎನ್. ಎಸ್. ಶ್ರೀ ಎನ್.ಆರ್. ಎಸ್. ಪರ ವಕೀಲರಿಂದ :</u>**

ಅಪಘಾತ ಆದ ದಿನದಂದು ನಾನು ಎತ್ತುಗಳ ಜೊತೆ ಮನೆಯಿಂದ ಹೊಲಕ್ಕೆ ಹೊರಟಿದ್ದೆ, ಏಪ್ರಿಲ್ 2022 ರ ಇಸವಿಯಲ್ಲಿ ಬೆಳಿಗ್ಗೆ 5-00 ಗಂಟೆಗೆ ಮನೆ ಬಿಟ್ಟು 10-15 ನಿಮಿಷಗಳ ನಂತರ ಚಿತ್ತಾಪೂರದ ಮುಖ್ಯ ರಸ್ತೆ ಮೇಲೆ ಅಪಘಾತ ಆಗಿರುತ್ತದೆ. ಅಪಘಾತ ಆದ ನಂತರ ಎತ್ತಗಳನ್ನು ಪಶು ಆಸ್ಪತ್ರೆಗೆ ತೋರಿಸಿದ್ದೇನೆ. ಎತ್ತುಗಳನ್ನು ಸ್ಥಳೀಯ ವೈದ್ಯರು ಮನೆಗೆ ಬಂದು ಚಿಕಿತ್ಸೆ ಕೊಡುತ್ತಿದ್ದರು. ಚಿಕಿತ್ಸೆ ಕೊಟ್ಟರು ಸಹ ಎತ್ತುಗಳ ಆರೋಗ್ಯದಲ್ಲಿ ಸುಧಾರಣೆ ಕಂಡು ಬಂದಿರುವುದಿಲ್ಲಾ. 2 ಎತ್ತುಗಳು ಇದ್ದವು. ಸದರಿ ಕಿಲ್ಲಾರಿ ತಳಿ ಇದ್ದವು. ಸದರಿ ಕಿಲ್ಲಾರಿ ತಳಿಯ ಎತ್ತುಗಳು ಅಂದಾಜು 2 ರಿಂದ 3 ಲಕ್ಷ ಬೆಲೆ ಇದ್ದವು. ಎತ್ತುಗಳನ್ನು

**ಎಮ್ ವಿ ಸಿ ನಂಃ1544/2022**
**ಪಿ.ಡಬ್ಲ್ಯೂಃ1,**

ಮಾರಾಟಮಾಡಿಲ್ಲಾ ಅವು ಅಪಘಾತದಿಂದ ತೀರಿ ಹೋಗಿದ್ದಾವೆ. ಎತ್ತುಗಳು ಅಪಘಾತದಿಂಧ ತೀರಿ ಹೋಗಿವೆ ಎಂದು ದಾಖಲೆ ಸಲ್ಲಿಸಿಲ್ಲಾ. ಸದರಿ ವಾಹನ ಟಿ.ಎನ್. -52-ಪಿ-1578 ರ ಬೇಜವಾಬ್ದಾರಿಯಿಂದ ಅಪಘಾತ ಆಗಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಿಪಿ-7 ರಿಂದ 9 ನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಎತ್ತುಗಳ ಬೆಲೆ 10 ಲಕ್ಷ ಆಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಎತ್ತುಗಳ ಜೊತೆಗೆ ಮಧ್ಯ ರಸ್ತೆಯಲ್ಲಿ ಹೋಗುತ್ತಿರುವಾಗ ಲಾರಿ ಚಾಲಕನು ಹಾರ್ನ ಬಾರಿಸಿದ್ದರಿಂದ ಎತ್ತುಗಳು ಗಾಬರಿಗೊಂಡು ಲಾರಿಗೆ ಬಂದು ಡಿಕ್ಕಿ ಪಡಿಸಿವೆ ಎಂದರೆ ಸರಿಯಲ್ಲ. ಸದರಿ ಎತ್ತುಗಳ ಬೆಲೆ ಕೇವಲ 1 ಲಕ್ಷ, ಆದರೆ 10 ಲಕ್ಷ ಎಂದು ಬೆಲೆ ತೋರಿಸಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರ ಜೊತೆಗೆ ಮಿಲಾಫೆ ಆಗಿ ಸುಳ್ಳು ದೂರು ಸೃಷ್ಟಿಸಿ, ಸುಳ್ಳು ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**